**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 392/2022**

**ಚಾ.ಸಾ-2**

**ಪ್ರಾ.ಸಾ-2**

**ಸಾಕ್ಷಿಗೆ ದಿನಾಂಕ 27-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಬಸವರಾಜ |
| ತಂದೆಯ ಹೆಸರು | ಃ | ಅಯ್ಯಪ್ಪ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಹಾಲಗಡ್ಲಾ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಚಾಸಾ-1 ಮತ್ತು 3 ನನಗೆ ಗೊತ್ತು.

ಸಾಕ್ಷಿಗೆ ಗುನ್ನ ಸ್ಥಳದ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಗುನ್ನ ಸ್ಥಳದ ಪಂಚನಾಮೆಯನ್ನು ನಿಪಿ-6 ಎಂದು ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 31-05-2021ರಂದು ಚಾಸಾ-1ರವರ ಹೊಲ ಸ.ನಂ.104ರಲ್ಲಿ ಮಾಡಿರುತ್ತೇನೆ. ಕಂಬ ಮುರದಿದ್ದರು ಆ ಸಂಬಂಧವಾಗಿ ಪೊಲಿಸರು ಬಂದು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯನ್ನು ಬೆಳಿಗ್ಗೆ 9 ರಿಂದ 10 ಗಂಟೆವರೆಗೆ ಮಾಡಿರುತ್ತಾರೆ. ಪೊಲೀಸರು ಪಂಚನಾಮೆಯನ್ನು ಮಾಡಿ ಸಿಮೆಂಟಿನ ಕಂಬ ಜಪ್ತಿಪಡಿಸಿಕೊಂಡಿರುತ್ತಾರೆ. ಪಂಚನಾಮೆ ಜಾಗದ ಚತುರ್ಸಿಮೆ ಉತ್ತರೆ ರೋಡ, ದಕ್ಷಿಣಕ್ಕೆ ಚಾಸಾ-1ರವರ ಹೊಲ, ಪೂರ್ವಕ್ಕೆ ಚಾಸಾ-1ರವರ ಹೊಲ, ಪಶ್ಚಿಮಕ್ಕೆ ಹವಳಪ್ಪರವರ ಹೊಲ ಇರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ.ವೈ. ವಕೀಲರಿಂದ**

ಮೊದಲಿನಿಂದಲೂ ನಿಮ್ಮ ಮತ್ತು ಚಾಸಾ-1ರವರ ಸಂಬಂಧ ಸರಿಯಾಗಿಯೇ ಇದೆ ಎಂದರೆ ಸರಿ. ಪಂಚನಾಮೆ ಮಾಡುವ ಸಮಯದಲ್ಲಿ ನಿಮಗೆ ಯಾರು ಕರೆದರು ಎಂದರೆ ಓಗಪ್ಪ ಪೂಜಾರಿ ಕರೆದಿರುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ನಾನು ಊರಿನಲ್ಲಿ ಇದ್ದೆನು. ಕರೆದಾಗ ಬಂದಿರುತ್ತೇನೆ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನಾನು ಹೋಟೆಲಿನಲ್ಲಿ ಇದ್ದೆನು. ಹೋಟೆಲಿನಲ್ಲಿ ಮೂರು ಜನ ಇದ್ದೆವು. ಪಂಚನಾಮೆ ಮಾಡುವ ಸಮಯದಲ್ಲಿ ಹೋಟೆಲಿನಿಂದ ಇಬ್ಬರು ಹೋಗಿರುತ್ತೇವೆ. ಅವರು ಯಾರು ಯಾರು

ಹೋಗಿರುತ್ತೀರಿ ಎಂದರೆ ಮಾಳಪ್ಪ ಪೂಜಾರಿ ಮತ್ತು ನಾನು ಹೋಗಿರುತ್ತೇವೆ. ಪಂಚನಾಮೆಯಲ್ಲಿ ಬರೆದಿರುವುದು ನಿಮಗೆ ಗೊತ್ತಾ ಎಂದರೆ ಬರೆದಿರುವುದನ್ನು ನೋಡಿ ಸಹಿ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಸದರಿ ಪಂಚನಾಮೆಯನ್ನು ಪೊಲೀಸರು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ. ಪಂಚನಾಮೆಯ ಜಾಗವನ್ನು ಯಾರು ತೋರಿಸಿದರು ಎಂದರೆ ಎಂ.ಎಸ್.ಪೂಜಾರಿ ಮತ್ತು ಓಗಪ್ಪ ಪೂಜಾರಿ ಎಂದು ಉತ್ತರಿಸುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ಅಂದಾಜು 4 ಜನರ ಇದ್ದರು. ಅವರಲ್ಲಿ ಇಬ್ಬರು ಪೊಲೀಸರು ಇಬ್ಬರು ಸಾಕ್ಷಿದಾರರು ಇದ್ದರು. ಪೊಲೀಸರು ಬೈಕ್ ತೆಗೆದುಕೊಂಡು ಬಂದಿದ್ದರು. ಸದರಿ ಬೈಕ್ ನಂಬರ್ ಹೇಳಲು ಬರುತ್ತಾ ಎಂದರೆ ನಂಬರ್ ಹೇಳಲು ಬರುವುದಿಲ್ಲ ಆದರೆ ಅವರು ಬೈಕ್ ತೆಗೆದುಕೊಂಡು ಬಂದಿದ್ದರು ಎಂದು ಉತ್ತರಿಸುತ್ತಾರೆ. ಇಬ್ಬರು ಪೊಲೀಸರಲ್ಲಿ ಪಂಚನಾಮೆ ಯಾರು ಬರೆದರು ಎಂದರೆ ಮೇಡಂರವರು ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ಪಂಚನಾಮೆಗೆ ಎಷ್ಟು ಜನರ ಸಹಿ ಮಾಡಿದರು ಎಂದರೆ ಇಬ್ಬರು ಸಹಿ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ನಾನು ಮತ್ತು ಮಾಳಪ್ಪ ಪೂಜಾರಿ ಸಹಿ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಪಂಚನಾಮೆಗೆ ಅಂದಾಜು ಎಷ್ಟು ಸಹಿ ಮಾಡಿದ್ದೀರಿ ಎಂದರೆ ಸಹಿ ಮಾಡಿದ್ದೇನೆ ಆದರೆ ಎಣಿಸಿಲ್ಲ ಎಂದು ಉತ್ತರಿಸುತ್ತಾರೆ.  ಮಾಳಪ್ಪ ಪೂಜಾರಿ ಎಷ್ಟು ಸಹಿ ಮಾಡಿದ್ದಾರೆ ಎಂದರೆ ಸಹಿ ಮಾಡಿದ್ದಾನೋ ಬಟ್ಟಿದ್ದಾನೋ ನಾನು ಎಣಿಸಿಲ್ಲ ಎಂದು ಉತ್ತರಿಸುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ಆಜುಬಾಜು ಹೊಲದವರು ಬಂದಿದ್ದರೆ ಎಂದರೆ ಯಾರೂ ಬಂದಿಲ್ಲ ಎಂದು ಉತ್ತರಿಸುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ಎಷ್ಟು ಕಂಬಗಳು ಇದ್ದವು ಎಂದರೆ 20 ಕಂಬ ಹಾಕಿದ್ದು ಇದ್ದವು ಅದರಲ್ಲಿ 10 ಕಂಬ ಮುರಿದಿದ್ದರು ಎಂದು ಉತ್ತರಿಸುತ್ತಾರೆ. ಸದರಿ ಕಂಬಗಳನ್ನು ದಕ್ಷಿಣ-ಉತ್ತರವಾಗಿ ಹಾಕಿದ್ದರು. ಮುರದಿರುವ ಒಂದು ಕಂಬದ ತುಕಡಿಯನ್ನು ಒಯ್ದಿರುತ್ತಾರೆ. ಸ.ನಂ.104 ಯಾವ ದಿಕ್ಕಿಗೆ ಬರುತ್ತದೆ ಎಂದರೆ ಪೂರ್ವ, ಪಶ್ಚಿಮ, ಉತ್ತರ ದಕ್ಷಿಣಕ್ಕೆ ಬರುತ್ತದೆ. ಸದರಿ ಹೊಲಕ್ಕೆ ಹೋಗಬೇಕಾದರೆ ಯಾವ ದಿಕ್ಕಿನಿಂದ ಹೋಗಬೇಕು ಎಂದರೆ ಉತ್ತರ ದಿಕ್ಕು ಎಂದು ಉತ್ತರಿಸುತ್ತಾರೆ. ಪಂಚನಾಮೆ ಎಷ್ಟು ಪುಟಗಳಲ್ಲಿ ಬರೆದಿದ್ದಾರೆ ಎಂದರೆ ಗೊತ್ತಿಲ್ಲ. ಸ.ನಂ.104 ಎಷ್ಟ ಎಕರೆ ಗುಂಟೆ ಇದೆ ಎಂದರೆ 4 ಎಕರೆ ಎಂದು ಉತ್ತರಿಸುತ್ತಾರೆ. ಸ.ನಂ.104 ಮೂಲತಃ ಚಾಸಾ-1ರವರ ಹೊಲ ಇರುತ್ತದೆ ಎಂದರೆ ಸರಿ. ನ್ಯಾಯಾಲಯಕ್ಕೆ ಬರಬೇಕಾದರೆ ಚಾಸಾ-1 ಮತ್ತು ನೀವು ಕೂಡಿ ಬಂದಿದ್ದೀರಿ ಎಂದರೆ ಪೊಲೀಸರು ಫೋನ್ ಮಾಡಿದ್ದರು ಎಂದು ಉತ್ತರಿಸುತ್ತಾರೆ. ಊರಲ್ಲಿ ಯಾವುದಾದರೂ ಕೊಡು ತೆಗೆದುಕೊಳ್ಳುವುದು ನಿಮ್ಮ ಹಿರಿಯರಿಂದ ಚಾಸಾ-1ರವರ ಹಿರಿಯರಿಂದ ನಡೆಯುತ್ತಾ ಬಂದಿರುತ್ತದೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮತ್ತು ಆರೋಪಿತರ ಮಧ್ಯೆ ಮೊದಲಿನಿಂದಲೂ ದ್ವೇಷ ಇದೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಯಾವುದೇ ಕಂಬವನ್ನು ಒಡೆದಿರುವುದನ್ನು ನೀವು ನೋಡಿಲ್ಲ ಮತ್ತು ಅಲ್ಲಿ ಯಾವುದೇ ಕಂಬ ಒಡೆದಿಲ್ಲದಿದ್ದರೂ ಸಹ ಚಾಸಾ-1ರವರಿಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ